

ಮುಂಬೈ ಮಾಯಾನಗರಿಯಲ್ಲಿ ವಿಮಲತ್ತೆ ಜುಮ್ ಅಂತ ದೊಡ್ಡ ಕಾರಿನಲ್ಲಿ ಓಡಾಡಿಕೊಂಡು, ಫಿಲ್ಮ್‌ಗಳನ್ನು ನೋಡಿಕೊಂಡು ಸಮುದ್ರ ತೀರದ ಓಡಾಟಗಳನ್ನು ಮಾಡಿಕೊಂಡು ರಸ್ತೆಯಲ್ಲಿ ಕಾಣಸಿಗುವ ಸಿನಿಮಾ ತಾರೆಯರ ಸ್ನೇಹ ಗಳಿಸಿ... ಹೀಗೆ... ಅಬ್ಬಾ! ವಿಮಲತ್ತೆಯ ಅದೃಷ್ಟ ನಮ್ಮನ್ನು ಏಕ್‌ದಂ ಓದಿನ ಕಡೆಗೆ ಆಗಾಗ್ಗೆ ಏಕಾಗ್ರತೆ ಸಾಧಿಸುವಂತೆ ಮಾಡುತ್ತಿತ್ತು. ನಾವೂ ಅಂತಹದ್ದೇ ಜೀವನ ಗಿಟ್ಟಿಸೋದಕ್ಕೆ ಓದು ಒಂದೇ ನಮಗೆ ಕಂಡ ದಾರಿದೀಪ.

ನಮ್ಮ ಸೋದರಮಾವನ ಹೆಂಡತಿ ಅಂದ್ರೆ ನಮ್ಮಮ್ಮನ ಅತ್ತಿಗೆ ಉರುಫ್ ನಮ್ಮ ಅತ್ತೆ ಅಲಿಯಾಸ್ ವಿಮಲತ್ತೆಯ ಖಾಸಾ ಅಕ್ಕ ಕಮಲತ್ತೆ ಮನೆಗೆ ಬಂದಾಗ, ‘ಅತ್ತೇ... ವಿಮಲತ್ತೆ ನಿಮ್ಮ ಮನೆಗೋ ಅಥವಾ ನಿಮ್ಮ ಅಮ್ಮನ ಮನೆಗೋ ಬಂದಾಗ ನಮ್ಮನ್ನೂ ಕರೆದುಕೊಂಡು ಹೋಗಿ...’ ಎಂತಲೋ, ಅಥವಾ ‘ಈ ಬೇಸಿಗೆ ರಜೆಗೆ ನಾವೇ ಮುಂಬೈಗೇ ಹೋಗಿಬರೋಣ...’ ಅಂತಾನೋ ಆಕೆಗೆ ದುಂಬಾಲು ಬೀಳ್ತಿದ್ವಿ.

ಆಕೆ ನಮ್ಮನೇಲಿ ಇರೋವರ್ಗೂ ಪುಸ್ತಕ ಬಿಟ್ಟು ಆಚೀಚೆ ತಿರುಗುತ್ತಾ ಕಾಡುಹರಟೆ ಹೊಡಿಯೋಕೆ, ಸುಮ್ಮನೆ ಕಾಲಕ್ಷೇಪ ಮಾಡ್ತಾ ಕೂರೋದಕ್ಕೆ ಬಿಡುತ್ತಿರಲಿಲ್ಲ. ಮನೆ ಕೆಲಸದಲ್ಲಿ ಅಮ್ಮನಿಗೆ ಸಹಾಯ ಮಾಡಲಿಕ್ಕೆ ಹೋದ್ರೂ ಸಹ ಬೈಯ್ತಿದ್ರು. ‘ಹೋಗ್ರಮ್ಮಾ, ಹೋಗಿ ಓದ್ಕೊಳ್ಳಿ. ನಾವು ಈ ಕೆಲಸ ಮಾಡ್ಕೋತೀವಿ. ಅಡುಗೆಮನೆ ಮುಸುರೆ ಪಾತ್ರೇನಾ ಈಗ್ಲೇ ಏಕೆ ಕುತ್ತಿಗೆಗೆ ಗಂಟು ಹಾಕಿಕೊಳ್ತೀರಿ?’ ಎಂದು ರೇಗಿ ಹೊರಗೆ ಕಳಿಸ್ತಿದ್ರು. ಜೊತೆಗೆ ಅಮ್ಮನಿಗೂ, ‘ನೋಡು ಪ್ರಭಾ, ಹೆಣ್ಮಕ್ಕಳಿಗೆ ಈಗ ಮನೆ ಕೆಲಸ ಹಚ್ಚಬೇಡ. ಶಿಸ್ತಿಂದ ಓದಿ ಒಂದು ಒಳ್ಳೆ ನೌಕರಿ ಹಿಡೀಲಿ. ಅವರನ್ನು ನಮ್ಮ ಥರ ಮಾಡ್ತಿಯೋ ಅಥ್ವಾ ವಿಮಲೆ ಥರಾ ಮಾಡ್ತಿಯೋ ಆಯ್ಕೆ ನಿನ್ ಕೈಲಿದೆ ನೋಡು. ಮೊದ್ಲು ಚೆನ್ನಾಗಿ ವಿದ್ಯೆ ಕಲಿಯಲಿ. ಆಮೇಲೆ ಈ ಮನೆಕೆಲ್ಸ ಎಲ್ಲಾ ಯಾವ ಲೆಕ್ಕ ಆಗುತ್ತೆ ಹೇಳು?’ ಎಂದು ಅಮ್ಮನ ಬ್ರೈನ್ ವಾಶ್ ಮಾಡುತ್ತಿದ್ರು. ಕಮಲತ್ತೆಗೂ ತಮ್ಮ ತಂಗಿ ವಿಮಲೆ ಬಗೆಗೆ ಒಂದು ರೀತಿಯ ಹೆಮ್ಮೆ.

ನಮ್ಮ ಅಮ್ಮನೂ ಒಂಥರಾ ಸರಿಯೇ. ತಮ್ಮ ಮದುವೆಯಾಗಿ ತೌರ ಮನೆಯಿಂದ ಹೊರ ಬರೋವರ್ಗೂ ಕಮಲತ್ತೆ ಒಂದೆರಡು ವರ್ಷ ಸಾಕಿದ್ದರ ಬಗ್ಗೆ ಅವರಿಗೆ ಕೃತಜ್ಞತೆಯಿತ್ತು. ಕಮಲತ್ತೆ ಸಹ ಅಮ್ಮನ್ನ ಮಗಳ ರೀತಿ ಚೆನ್ನಾಗಿ ನೋಡ್ಕೊಂಡ್ರಂತೆ. ಹೀಗಾಗಿ ಕಮಲತ್ತೆ ಹೇಳಿದ ಮಾತನ್ನು ಅಮ್ಮ ಪದೇಪದೇ ನೆನಪಿಸಿಕೊಂಡು, ಸಾಧ್ಯ ಆದ್ರೆ ಆಚರಣೆಗೂ ತರುತ್ತಿದ್ರು.

ಇದರಿಂದ ನಮಗೆ ಒಂಥರಾ ಒಳ್ಳೆಯದಾಯ್ತು ಬಿಡಿ. ನಮ್ಮನ್ನು ಓದಿಸಲಿಕ್ಕೆಂದೇ ಹಳ್ಳಿಯ ಕೂಡುಕುಟುಂಬದಿಂದ ಬೇರೆ ಆಗಿ ಪಟ್ಟಣಕ್ಕೆ ಅಪ್ಪ ಬಂದು ಸಣ್ಣ ಬಿಸಿನೆಸ್ ಪ್ರಾರಂಭಿಸಿದ್ರು. ತಮ್ಮದೇ ಆದ ಟ್ರ್ಯಾಕ್ಟರ್ ಶೋರೂಂ ಮಾಡಿಕೊಂಡು ಯಶಸ್ವಿ ಆದ್ರು. ಇದಕ್ಕೆಲ್ಲಾ ಒಂದು ರೀತಿ ಕಮಲತ್ತೆಯೇ ಕಾರಣ. ಪರೋಕ್ಷವಾಗಿ ವಿಮಲತ್ತೆ.

ಆದರೆ, ಊರು ಬಿಡುವಾಗ ‘ಮನೆ ಒಡೆದ ಪಾಪಿ’ ಅಂತ ಹಣೆಪಟ್ಟಿ ಹಾಕ್ಕೊಂಡಿದ್ದು ಮಾತ್ರ ಅಮ್ಮ. ಮುಂದೆ ನಾಕಾರು ವರ್ಷಗಳಲ್ಲಿ ಪರಸ್ಪರ ಜಗಳ ಆಡಿಕೊಂಡು ಜಮೀನು ಮಾರಿ ಸಾಲಗಾರರಾದ ಭಾವಮೈದುನರಿಗೆ ಧೈರ್ಯ ಹೇಳಿದ್ದು, ಅಪ್ಪನ್ನ ಒಪ್ಪಿಸಿ ಅವರಿಗೆ ಹಣ ಸಹಾಯ ಮಾಡಿ ಆಸರೆಯಾದದ್ದು ಸಹ ಅಮ್ಮನೇ...

ಅಯ್ಯೋ.. ವಿಮಲತ್ತೆ ಕತೆ ಎಲ್ಲಿಗೆಲ್ಲಿಗೆ ಹೋಗ್ತಿದೆ!

ನಾವು ವಿಮಲತ್ತೆಯನ್ನು ಭೇಟಿಯಾದ್ವಾ? ಆಕೆಯೊಡನೆ ಏನೇನೆಲ್ಲಾ ಮಾತಾಡಿದ್ವಿ ಅಂತ ನಿಮಗೆ ಕುತೂಹಲವಾಗಿದೆ ಅಲ್ವಾ?

ನೋಡಿ, ನಮಗೆ ಬುದ್ಧಿ ಬೆಳೆದು, ಸ್ವತಂತ್ರವಾಗಿ ಹೊರಗೆ ಓಡಾಡುವ ಹೊತ್ತಿಗಾಗಲೇ ವಿಮಲತ್ತೆ ಲಂಡನ್ ಸೇರಿಯಾಗಿತ್ತು!

ವಿಮಲತ್ತೆಯನ್ನು ಎಂಜಿನಿಯರಿಂಗ್ ಓದಿದ ಗಂಡಿಗೆ ಮದುವೆ ಮಾಡಿದ್ದೇ ಒಂದು ವಿಶೇಷ ಆ ಕಾಲಕ್ಕೆ. ಮುಂಬೈನಲ್ಲಿ ಕೆಲಸಕ್ಕಿದ್ದ ಆಕೆಯ ಗಂಡ ಕಿಶೋರ ಮಾಮ ಸರಕಾರಿ ನೌಕರಿ ಬಿಟ್ಟು, ಖಾಸಗಿ ಕಂಪನಿ ಸೇರಿ ಅಲ್ಲಿಂದ ಲಂಡನ್‌ಗೆ ಹಾರಿದ್ದು ಸಹ ವಿಮಲತ್ತೆಯ ಚಿತಾವಣೆಯಿಂದಲೇ ಎಂದು ಕಮಲತ್ತೆ ಹೆಮ್ಮೆಯಿಂದ ಹೇಳ್ತಾರೆ. ಲಂಡನ್ ಸೇರಿ ಅವರು ಸಾಧಿಸಿದ್ದು ಅಪಾರವೇ. ಅಲ್ಲಿಂದಲೇ ಊರಿನ ಶಾಲೆಗೆ, ಹೆರಿಗೆ ಆಸ್ಪತ್ರೆಗೆ ಭರಪೂರ ಹಣ ಸಹಾಯ ಮಾಡಿದ್ದೂ ವಿಮಲತ್ತೆಯೇ.

ಇಂಥಾ ಜಾಣೆಯಾದ ವಿಮಲತ್ತೆಯದ್ದು ಬಹಳ ಅಪರೂಪದ ಆಕರ್ಷಕ ವ್ಯಕ್ತಿತ್ವವಂತೆ. ಆ ಕಾಲದ ಪ್ರಸಿದ್ಧ ನಟರೊಡನೆ ಬೆಳ್ಳಿತೆರೆ ಹಂಚಿಕೊಳ್ಳುವ ಅವಕಾಶವೂ ಆಕೆಗೆ ಬಂದಿತ್ತಂತೆ! ಅಂಥಾ ಮೇರು ನಟರೊಡನೆ ನಟಿಸುವುದು ಸೌಭಾಗ್ಯ ಒಪ್ಪಿಕೋ ಎಂದ ಅಪ್ಪಅಮ್ಮನಿಗೆ, ‘ನಟನೆ ನನ್ನಿಷ್ಟದ ವಿಚಾರ ಅಲ್ಲ. ನಾನೂ ಸಹ ಅವರ ಅಭಿಮಾನಿ. ಆದ್ರೆ ನಂಗೆ ನಟಿಯಾಗೋಕೆ ಇಷ್ಟ ಇಲ್ಲ’ ಎಂದು ಮನೆಯವರ ವಿರೋಧದ ನಡುವೆಯೂ ಆಕೆ ತಿರಸ್ಕರಿಸಿದ್ದರಂತೆ! ಸ್ವತಃ ಆ ಪ್ರಸಿದ್ಧ ನಟರೇ ವಿಮಲತ್ತೆಯ ವೈಯಕ್ತಿಕ ನಿಲುವನ್ನು ಮುಕ್ತವಾಗಿ ಸ್ವಾಗತಿಸಿ, ‘ಇಂತಹಾ ಕೆಚ್ಚನ್ನು ನಮ್ಮ ಹೆಣ್ಮಕ್ಳು ರೂಢಿಸಿಕೊಳ್ಬೇಕು ನೋಡಿ’ ಎಂದು ಶ್ಲಾಘಿಸಿದ್ದರಂತೆ!

ಇದನ್ನು ಕೇಳಿ, ಅಪಾರವಾದ ಸಿನಿಮಾ ಹುಚ್ಚು ಹಿಡಿಸಿಕೊಂಡಿದ್ದ ನಮಗೆ ಆಗ ತುಂಬಾ ಬೇಜಾರಾಗಿತ್ತು. ಆದ್ರೆ ಮುಂದೆ ಬೆಳೆದು ದೊಡ್ಡವರಾಗಿ ಸ್ತ್ರೀ ಅಸ್ಮಿತೆ, ಫೆಮಿನಿಸಂ ಎಂದೆಲ್ಲಾ ಮಾತನಾಡುತ್ತಾ ಹೋದಂತೆ ‘ವಿಮಲತ್ತೆ ಆಗಲೇ ಎಂಥಾ ಗಟ್ಟಿಗಿತ್ತಿ!’ ಎಂದು ಅಭಿಮಾನ ಮೂಡಿತ್ತು.

ವಿಮಲತ್ತೆ ಬಗ್ಗೆ ಈ ತರಹದ ನಾನಾ ಕತೆ ಕೇಳಿ ಆಕೆಯನ್ನು ನೋಡಲೇಬೇಕೆಂದು ಹುಚ್ಚು ಹಿಡಿಸಿಕೊಂಡಿದ್ದ ನಮಗೆ ವಿಮಲತ್ತೆ ನೋಡಲು ಸಿಗಲೇ ಇಲ್ಲ.

ಕ್ಯಾನ್ಸರ್ ಕಾಯಿಲೆಗೆ ಶರಣಾದ ವಿಮಲತ್ತೆ, ಮೆಡಿಕಲ್ ಕಾಲೇಜೊಂದಕ್ಕೆ ದೇಹದಾನ ಮಾಡಿ ಅನುಪಮ ಚೆಲುವೆಯಾಗಿ ನಮ್ಮಳತೆಗೆ ನಿಲುಕಲಿಲ್ಲ.

ಪ್ರತಿಕ್ರಿಯಿಸಿ: **feedback@sudha.co.in**